## 8. "ಸ.ಹಿ.ಪ್ರಾ ಶಾಲೆ ಜಯಂತಿ ಗ್ರಾಮ "

'ಸಮಾಜದಲ್ಲಿ ಶಿಕ್ಷಕ ವೃತ್ತಿ ಪವಿತ್ರವಾದುದು' ಉತ್ತಮ ನಾಗರಿಕರನ್ನು ರೂಪಿಸಿ ರಾಷ್ಟ್ರ ಕಟ್ಟುವ ಹೊಣೆಗಾರಿಕೆ ನಮ್ಮ ಮೇಲಿದೆ. ಶಿವಮೊಗ್ಗ ಜಿಲ್ಲೆಯ, ಶಿವಮೊಗ್ಗ (ತಾ) ಕೊನೆಯ ಅಂಚಿನಲ್ಲಿರುವ ಬಿದಿರೆ ಗ್ರಾಮ ಪಂಚಾಯಿತಿಗೆ ಜಯಂತಿ ಗ್ರಾಮದ ಸ.ಹಿ.ಪ್ರಾ ಶಾಲೆ ಒಳಪಟ್ಟಿದ್ದು, 1972 ರಲ್ಲಿ ಪ್ರಾರಂಭವಾಗಿದೆ. ಕನ್ನಡ ಮಾಧ್ಯಮ ಶಾಲೆಯಾಗಿದ್ದು 6 ಕೊಠಡಿಗಳಿವೆ. 1ರಿಂದ 8ನೇ ತರಗತಿಗಳನ್ನು ಹೊಂದಿದ್ದು ಒಟ್ಟು 74 ವಿದ್ಯಾರ್ಥಿಗಳು ಹಾಗೂ ಮುಖ್ಯ ಶಿಕ್ಷಕರು, ಜಿಪಿಟಿ, ಟಿಜಿಟಿ, ಸಹ ಶಿಕ್ಷಕರು ಸೇರಿದಂತೆ 6 ಮಂದಿ ಶಿಕ್ಷಕರಿದ್ದಾರೆ.

ಈ ಗ್ರಾಮವು ಸುಮಾರು 1140 ಜನಸಂಖ್ಯೆ ಹೊಂದಿದ್ದು, ಬಹುಪಾಲು ಪೋಷಕರು ಸಣ್ಣ ಕೈಗಾರಿಕೆಯನ್ನ ಅವಲಂಬಿಸಿದ್ದು, ಆರ್ಥಿಕವಾಗಿ ಹಿಂದುಳಿದಿರುವವರು. ತಮ್ಮ ಹೆಚ್ಚು ಸಮಯವನ್ನು ಕೆಲಸ ಕಾರ್ಯಗಳಿಗಾಗಿಯೇ ಮೀಸಲಿಡುವ ಕಾರಣ, ಮಕ್ಕಳ ಶೈಕ್ಷಣಿಕ ಪ್ರಗತಿಯ ಕಡೆ ಗಮನ ಹರಿಸುವುದು ಕಡಿಮೆ. ಮುಖ್ಯ ಶಿಕ್ಷಕಿಯಾಗಿ ಶಾಲೆಗೆ ಬಂದಾಗ ಪ್ರಾರಂಭದಲ್ಲಿ ದಾಖಲಾತಿಯ ಕೊರತೆ, ಮೂಲಭೂತ ಸೌಕರ್ಯಗಳಿಲ್ಲದಿರುವುದು ಹಾಗೂ ಶಾಲೆಯ ಕಾರ್ಯಗಳಲ್ಲಿ ಸಮುದಾಯದ ಸಹಭಾಗಿತ್ವದ ಅಭಾವತೆಯು ನಮಗೆ ಬಹುಮುಖ್ಯ ಸವಾಲುಗಳಾಗಿದ್ದವು.

ಸರ್ಕಾರಿ ಶಾಲೆಗಳ ವಾಸ್ತವ ಸ್ಥಿತಿಗತಿಗಳು ನಮಗೆಲ್ಲರಿಗೂ ತಿಳಿದಿದೆ. ಶಾಲೆಯ ಅಸ್ತಿತ್ವದ ಹೋರಾಟಕ್ಕೆ ಮುಖ್ಯ ಶಿಕ್ಷಕಿಯಾಗಿ ನಾನು ನನ್ನ ತಂಡದ ಶಿಕ್ಷಕರು, ಶಿಕ್ಷಣ ಸಂಯೋಜಕರಾಗಿದ್ದ ಶ್ರೀಯುತ ಮಹೇಶ್ವರಪ್ಪರವರು, ನಮ್ಮ ಕ್ಲಸ್ಟರಿನ ಜನತಾ ಕಾಲೊನಿ ಶಾಲೆಯ ಶ್ರೀಮತಿ ತುಳಸಿ, CRPಯಾದ ಶ್ರೀಯುತ ಮಲ್ಲೇಶಪ್ಪರವರು ಹಾಗೂ ಇತರ ಇಲಾಖಾ ಅಧಿಕಾರಿಗಳ ಜೊತೆ ಸಮಾಲೋಚಿಸಿ, ಅವರ ಮಾರ್ಗದರ್ಶನ ಸಹಕಾರದಿಂದ, ದಾಖಲಾತಿ ಹೆಚ್ಚಳ, ಪೋಷಕರ ಸಹಕಾರ, ದಾನಿಗಳ ನೆರವು ಮತ್ತು ಗುಣಮಟ್ಟದ ಶಿಕ್ಷಣದ ಬಗ್ಗೆ ಅಭಿಯಾನ ಕೈಗೊಂಡು ಗ್ರಾಮದಲ್ಲಿನ ಪ್ರಮುಖ ಮುಖಂಡರನ್ನು ಭೇಟಿಯಾಗಿ, ಚರ್ಚಿಸಿ, ಗ್ರಾಮದ ಶಾಲೆಯ ಉಳಿವು ಹಾಗೂ ಪ್ರಗತಿಗೆ ಅವರ ಸಹಾಯ ಸಹಕಾರ ಅಗತ್ಯವಿದೆ ಎಂಬುದನ್ನು ಮನವರಿಕೆ ಮಾಡಿದೆವು.

ವರ್ಷದಿಂದ ವರ್ಷಕ್ಕೆ ದಾಖಲಾತಿಯಲ್ಲಿ ಇಳಿಕೆಯಾಗುತ್ತಿರುವುದು ಒಂದು ಗಂಭೀರ ಸಮಸ್ಯೆಯಾಗಿದೆ. ಇದರಲ್ಲಿ ಶಾಲೆಯ ಅಸ್ತಿತ್ವದ ಜೊತೆ ಶಿಕ್ಷಕರ ಅಸ್ತಿತ್ವವೂ ಬೆಸೆದುಕೊಂಡಿರುವುದು ವಾಸ್ತವದ ಸಂಗತಿ. ದಾಖಲಾತಿ ಹೆಚ್ಚಿಸಲು 100 ಮೀಟರ್ ಅಂತರದಲ್ಲೇ ಇರುವ ಖಾಸಗಿ ಶಾಲೆಗಳ ಮಕ್ಕಳ ಮನೆಗಳಿಗೆ ಭೇಟಿ ನೀಡಿ ಬ್ಯಾನರ್ ಹಿಡಿದು, ಕರಪತ್ರನೀಡಿ ಸರ್ಕಾರದ ಸೌಲಭ್ಯಗಳ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿ, ಈ ವರ್ಷ 1ನೇ ತರಗತಿಗೆ 8 ಮಕ್ಕಳು ಸೇರಿದಂತೆ ಒಟ್ಟು10 ಮಕ್ಕಳು ದಾಖಲಾಗಿದ್ದಾರೆ. 1ನೇ ತರಗತಿಯಿಂದಲೇ ಇಂಗ್ಲಿಷ್ ವಿಷಯಕ್ಕೆ ಒತ್ತು ನೀಡಿ, ಶಾಲಾ ಪ್ರಾರ್ಥನೆಯಲ್ಲಿ ಇಂಗ್ಲಿಷ್ ಪ್ರೇಯರ್, ಇಂಗ್ಲಿಷ್ ಪತ್ರ ವಿಷಯಗಳ ವಾಚನ, ಸೃಜನಾತ್ಮಕ ಕಲಿಕೆಗೆ ನವೀನ ತಂತ್ರಜ್ಞಾನವನ್ನು ಬಳಸಿಕೊಂಡು, ಗುಣಾತ್ಮಕ ಶಿಕ್ಷಣದ ವಾತಾವರಣವನ್ನು ಕಲ್ಪಿಸಿ ಕೊಡುತ್ತಿದ್ದೇವೆ. ದೇಶಾಭಿಮಾನ ಮೂಡಿಸಲು ಹಾಗೂ

ನೈಜ ಜೀವನಕ್ಕೆ ಪೂರಕವಾಗುವಂತೆ ಪಠ್ಯವಿಷಯವನ್ನೂ ಬೋಧಿಸಲಾಗುತ್ತಿದೆ. ಚರ್ಚೆ, ಹೊರಸಂಚಾರ, ಕ್ಷೇತ್ರಭೇಟಿ ಪ್ರವಾಸದ ಮೂಲಕ ಸಮಾಜ ವಿಜ್ಞಾನ, ಪರಿಸರ ವಿಜ್ಞಾನ, ಇನ್ನಿತರೆ ವಿಷಯಗಳನ್ನು ಬೋಧಿಸಲಾಗುತ್ತಿದೆ. ಪರಿಸರ ಕಾಳಜಿಯನ್ನು ಮೂಡಿಸಲು ವಿದ್ಯಾರ್ಥಿಗಳ ಪರಿಶ್ರಮದಿಂದಲೇ ಶಾಲಾ ಆವರಣದಲ್ಲಿ ಪಾರ್ಕನ್ನು ನಿರ್ಮಾಣ ಮಾಡಲಾಗಿದೆ.

ಸಮುದಾಯದ ಸಹಭಾಗಿತ್ವ ಹೆಚ್ಚಿಸಲು,ಪೋಷಕರಿಗೆ ಆಟೋಟ, ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದೇವೆ. ಮಕ್ಕಳ ದಿನಾಚರಣೆಯ ಪ್ರಯುಕ್ತ ಪಠ್ಯ-ಸಹಪಠ್ಯ ವಿಭಾಗದಲ್ಲಿ ಸಾಧನೆ ಮಾಡಿದ ಮಕ್ಕಳನ್ನು ಗುರುತಿಸಿ ಬಹುಮಾನ ನೀಡುವ ಮೂಲಕ ಇತರೆ ಮಕ್ಕಳಿಗೂ ಉತ್ತೇಜಿಸಲಾಗುತ್ತಿದೆ. ಶಾಲೆಯಲ್ಲಿ ಆಚರಿಸುವ ಪ್ರಮುಖ ದಿನಾಚರಣೆಯ ಪ್ರಯುಕ್ತ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ, SDMC ಹಾಗೂ ಗ್ರಾಮದ ದಾನಿಗಳ ನೆರವಿನಿಂದ ಬಹುಮಾನ ಹಾಗೂ ಸಿಹಿಯನ್ನು ವಿತರಿಸುತ್ತಿದ್ದೇವೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಖಾಸಗಿ ಶಾಲೆಯೊಂದಿಗೆ ಸ್ಪರ್ಧಿಸಲು, ಸರ್ಕಾರ ನೀಡುವ ಅನುದಾನ ಸಾಲದು. ಶಾಲೆಯ ಅಭಿವೃದ್ಧಿಗೆ ದಾನಿಗಳ ನೆರವು ಪಡೆಯುತ್ತಿದ್ದೇವೆ. ಶ್ರೀಯುತ ಜ್ಯೋತಿ ಪ್ರಕಾಶ್, ಎಪಿಎಂಸಿ ಅಧ್ಯಕ್ಷರೂ, ಶಿವಮೊಗ್ಗ ಇವರು 4 ಗ್ರೀನ್ ಬೋರ್ಡ್ಗಳನ್ನು, ಶ್ರೀಯುತ ಆಂಜನೇಯಲು,ಬಿಬಿಎಂಪಿ ಬೆಂಗಳೂರು ಇವರು ಸ್ವಾತಂತ್ರ್ಯ ಹೋರಾಟಗಾರರ ಮತ್ತು ಸಾಧಕರ 22 ಭಾವಚಿತ್ರಗಳನ್ನು, ಗ್ರಾಮಸ್ಥರಾದ ಶ್ರೀಯುತ ಪ್ರಶಾಂತ್, ಇವರು 1 ಜೆರಾಕ್ಸ್ ಮಿಷನ್, 2 ಟೇಬಲ್ಸ್ ಹಾಗೂ 6 ಚೇರುಗಳನ್ನು, ಶ್ರೀಯುತ ರುದ್ರೇಗೌಡ್ರು, ಇವರು ಶುದ್ಧ ಕುಡಿಯುವ ನೀರಿನ ಅಕ್ವಾಗಾರ್ಡನ್ನು, ಹಾಗೂ ನಮ್ಮ ಶಾಲಾ ಶಿಕ್ಷಕರ ಸಹಾಯದಿಂದ ನಲಿ ಕಲಿ ತರಗತಿಗೆ ಏಕ ರೀತಿಯ ಅಸನ ವ್ಯವಸ್ಥೆಯನ್ನು, ಶಾಲಾ ಅಭಿವೃದ್ಧಿಯ ಶಾಶ್ವತ ಸಮಿತಿಯ ಸದಸ್ಯರು ಮತ್ತು SDMC ವತಿಯಿಂದ ರಾಷ್ಟ್ರೀಯ ದಿನಾಚರಣೆ ಹಾಗೂ ಆಂದೋಲನಗಳಿಗೆ ಬಳಕೆಯಾಗುವಂತೆ ಡ್ರಮ್- ಬ್ಯಾಂಡ್ ಸೆಟ್ಟನ್ನು ಕೊಡುಗೆಯಾಗಿ ಪಡೆದಿದ್ದೇವೆ. ಗ್ರಾಮಸ್ಥರಾದ ಶ್ರೀಯುತ ಬಾಲಕೃಷ್ಣ ಗೌಡರವರ ಸಹಕಾರದಿಂದ ನೀರಿನ ತೊಟ್ಟಿಯ ಮುಚ್ಚಳ ಮತ್ತು ಶಾಲಾ ಮುಂಭಾಗದ ಗೇಟನ್ನು ಹೊಸದಾಗಿ ನಿರ್ಮಿಸಿಕೊಳ್ಳಲಾಗಿದೆ.

ಶ್ರೀಯುತ ತಮಾಯಣ್ಣ, ಗ್ರಾಮಸ್ಥರು ಹಾಗೂ ಮಾಜಿ ಗ್ರಾ.ಪಂ. ಸದಸ್ಯರು ಮುಂದಾಳತ್ವದಲ್ಲಿ ಜಿಲ್ಲಾ ಪಂಚಾಯಿತಿಯ ಅನುದಾನದಲ್ಲಿ 2 ಕೊಠಡಿಗಳಿಗೆ ಟೈಲ್ಸ್ ಅಳವಡಿಸಲಾಗಿದೆ. ಶಾಲಾ ಮಕ್ಕಳಿಗೆ ಕೈ ತೊಳೆಯಲು ಅನುಕೂಲವಾಗುವಂತೆ ಪ್ರತ್ಯೇಕವಾಗಿ ವ್ಯವಸ್ಥೆ ಮಾಡಿಸಲಾಗಿದೆ. ದಾಸೋಹ ಕೊಠಡಿಯನ್ನು ದುರಸ್ತಿ ಪಡಿಸಿಕೊಂಡು ಹೆಚ್ಚು ವಸ್ತುಗಳನ್ನು ಜೋಡಿಸಲು ಅನುಕೂಲವಾಗಲೆಂದು ಸ್ಲ್ಯಾಬುಗಳನ್ನು ಅಳವಡಿಸಲಾಗಿದೆ. ದಾಸೋಹ ತ್ಯಾಜ್ಯ ವಿಲೇವಾರಿ ಸುಗಮವಾಗಿ ಹೋಗಲು ಹಾಳಾದ ಚರಂಡಿಯ ಸಂಪರ್ಕವನ್ನು ಸರಿಪಡಿಸಲಾಗಿದೆ. ರಾಷ್ಟ್ರೀಯ ಹಬ್ಬಗಳ ಆಚರಣೆಗಾಗಿ ಧ್ವಜ ಕಂಬವನ್ನು ನವೀಕರಿಸಲಾಗಿದೆ. 5ವರ್ಷಗಳಿಂದ ಸ್ಥಗಿತವಾಗಿದ್ದ ಶಾಲಾ ವಾರ್ಷಿಕೋತ್ಸವವನ್ನು ಪುನಃ ಪ್ರಾರಂಭಿಸಿ, 2016-17 ರ ಸಾಲಿನಿಂದ ಆಚರಿಸುತ್ತಿದ್ದೇವೆ. ಮುಂಬರಲಿರುವ ಶಾಲಾ ವಾರ್ಷಿಕೋತ್ಸವಕ್ಕೆ ದಾನಿಗಳ ನೆರವು ಪಡೆದು ಶಾಲೆಗೆ ಸುಣ್ಣ ಬಣ್ಣ ಮಾಡಿಸುವ ಯೋಜನೆಯು ಇದೆ.

ಸರ್ಕಾರಿ ಶಾಲೆಗಳು ಅಸ್ತಿತ್ವ ಉಳಿಸಿ ಕೊಳ್ಳಬೇಕಾದ ಡೋಲಾಯಮಾನ ಸ್ಥಿತಿಯಲ್ಲಿ ಇತಿಹಾಸ ಸೇರದೆ, ಇತಿಹಾಸ ಸೃಷ್ಟಿಸುವ ಭವಿಷ್ಯದ ಸ್ಮಾರಕವಾಗಿ, ಆರೋಗ್ಯಯುತ ಸಮಾಜದ ನಿರ್ಮಾಣಕ್ಕೆ ಮುಂದಾಗುವಂತಾಗಬೇಕು. ಆ ನಿಟ್ಟಿನಲ್ಲಿ ಶಿಕ್ಷಕರಾಗಿ ನಾವು ನಮ್ಮ ವೃತ್ತಿಪರತೆಯನ್ನು ಮೈಗೂಡಿಸಿಕೊಂಡು ಗುಣಾತ್ಮಕ ಶಿಕ್ಷಣ ನೀಡಿ, ದಾಖಲಾತಿ ಏರಿಕೆಗೆ ಪ್ರಾಮಾಣಿಕವಾಗಿ ನಾವೆಲ್ಲರೂ ಶ್ರಮಿಸೋಣ.

ಅಲ್ಪಾವಧಿಯಲ್ಲಿ, ನಮ್ಮಶಾಲೆಯನ್ನು 'ಯಶಸ್ವಿಶಾಲೆಯನ್ನಾಗಿ' ಗುರುತಿಸಿ ಪ್ರೋತ್ಸಾಹಿಸಿದ, ಡಯೆಟ್ ಶಿವಮೊಗ್ಗ ಇವರಿಗೂ ಹಾಗೂ ಮಾರ್ಗದರ್ಶನ ನೀಡಿದ ನಮ್ಮ ಇಲಾಖಾ ಅಧಿಕಾರಿಗಳಿಗೂ ನಮ್ಮ ಶಾಲಾ ತಂಡದ ಪರವಾಗಿ ತುಂಬು ಹೃದಯದ ಧನ್ಯವಾದಗಳು ....









